**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು.**

**ಎಸ್.ಸಿ.ಸಂಖ್ಯೆಃ 3/2023**

| | |
|---|---|
| ಪಿರ್ಯಾದುದಾರರು | ಕರ್ನಾಟಕ ರಾಜ್ಯ ಸರ್ಕಾರ<br>ನಂಜನಗೂಡು ಗ್ರಾಮಾಂತರ ಪೋಲೀಸ್ ಠಾಣೆಯ<br>ಠಾಣಾಧಿಕಾರಿಯಿಂದ ಪ್ರತಿನಿಧಿಸಲ್ಪಟ್ಟಿದೆ. |

: **ವಿರುದ್ಧ** :

| | |
|---|---|
| ಆರೋಪಿತರು | ಶಿವು ಉಃ ಶಿವರಾಜು ಮತ್ತು ರವಿ ಉಃ ರವಿಚಂದ್ರ ಬಿ.ಬಿ. |

: **ದೋಷಾರೋಪಣೆ** :

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ **ಶ್ರೀ ಡಿ.ಪುಟ್ಟಸ್ವಾಮಿ,** ನಾನು ಈ ಕೆಳಕಂಡ ಆರೋಪಿತರಾದ

1. ಲೋಕೇಶ ಬಿನ್ ಹುಚ್ಚಪ್ಪ ನಾಯಕ ಮೃತಪಟ್ಟಿದ್ದು, ಈತನ ವಿರುದ್ಧ ಪ್ರಕರಣ ಮುಕ್ತಾಯಗೊಳಿಸಲಾಗಿದೆ.
2. ಶಿವು ಉಃ ಶಿವರಾಜು ಎನ್ ಬಿನ್ ನಂಜಪ್ಪ, ವಯಸ್ಸು 22 ವರ್ಷ, ವಾಸಃ ಚಿಕ್ಕಯ್ಯನಛತ್ರ ಗ್ರಾಮ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.
3. ರವಿ ಉಃ ರವಿಚಂದ್ರ ಬಿ.ಬಿ. ಬಿನ್ ಬಸವನಾಯಕ, ವಯಸ್ಸು 34 ವರ್ಷ, ವಾಸಃ ಬಂಚಳ್ಳಿಹುಂಡಿ ಗ್ರಾಮ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ **ದೋಷಾರೋಪಣೆ** ಏನೆಂದರೆಃ

ದಿನಾಂಕ 15.08.2022 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ನಂಜನಗೂಡು ತಾಲ್ಲೂಕು, ಚಿಕ್ಕಯ್ಯನ ಛತ್ರ ಸರ್ಕಲ್ ರಸ್ತೆಯಲ್ಲಿ ಚಾಸಾ-13 ಶಂಭುರವರು ಅವರ ಬೈಕನ್ನು ಆನ್ ಮಾಡಿ, ನಿಲ್ಲಿಸಿ ಪಕ್ಕದ ಅಂಗಡಿಗೆ ಹೋಗಿದ್ದಾಗ, ಚಾಸಾ-1 ದೇವರಾಜು ರವರು ಚಾಸಾ-13 ರವರಿಗೆ ನಿಮ್ಮ ಸ್ಕೂಟರ್ ನ್ನು ರಸ್ತೆ ಮಧ್ಯದಲ್ಲಿ ಏಕೆ ನಿಲ್ಲಿಸಿದ್ದೀರಿ ಎಂದು ಕೇಳಿದ ವಿಚಾರದಲ್ಲಿ

ಚಾಸಾ–13 ಮತ್ತು ಚಾಸಾ–1 ಹಾಗೂ ಚಾಸಾ–2 ಮಹೇಶ ರವರಿಗೆ ಗಲಾಟೆಯಾಗಿದ್ದು, ಇದೇ ವಿಚಾರದಲ್ಲಿ ಆರೋಪಿಗಳ ನಡುವೆ ದ್ವೇಷ ಇಟ್ಟುಕೊಂಡು, ದಿನಾಂಕ 17.08.2022 ರಂದು ಮಧ್ಯಾಹ್ನ 12.45 ಗಂಟೆ ಸಮಯದಲ್ಲಿ ಚಾಸಾ–2 ರವರು ನಂಜನಗೂಡು ತಾಲ್ಲೂಕು ಬಂಚಹಳ್ಳಿ ಗ್ರಾಮದ ಫಿಲ್ಟರ್ ನೀರಿನ ಸ್ವಿಚ್ ಆನ್ ಮಾಡಲು ಚಿಕ್ಕಯ್ಯನ ಛತ್ರ ಗ್ರಾಮದ ಸರ್ಕಲ್ ಬಳಿ ರಸ್ತೆಯಲ್ಲಿ ಹೋಗುತ್ತಿದ್ದಾಗ, ಅದೇ ಸ್ಥಳದಲ್ಲಿ ನಿಂತಿದ್ದ 2 ಮತ್ತು 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ಚಾಸಾ–2 ರವರನ್ನು ತಡೆದು, ತಬ್ಬಿಹಿಡಿದುಕೊಂಡು, ಅವರು ಮುಂದೆ ಹೋಗದಂತೆ ಅವರಿಗೆ ಅಕ್ರಮ ತಡೆ ಉಂಟು ಮಾಡಿದ್ದು, ಈ ಮೂಲಕ **ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ 34** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ–2 ರವರನ್ನು ತಬ್ಬಿ ಹಿಡಿದುಕೊಂಡಾಗ, ಮೃತ 1 ನೇ ಆರೋಪಿಯು, ಚಾಸಾ–2 ರವರನ್ನು ಕುರಿತು ನಮ್ಮ ಮಾವ ಶಂಭುವಿನ ಮೇಲೆ ಗಲಾಟೆ ಮಾಡುತ್ತೀರಾ, ಈ ದಿನ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು, ಚಾಸಾ–2 ರವರನ್ನು ಕೊಲೆ ಮಾಡುವ ಸಮಾನ ಉದ್ದೇಶದಿಂದ, ಆತನ ಬಳಿ ಇದ್ದ ಡ್ರಾಗನ್ ಬಟನ್ ಚಾಕುವಿನಿಂದ ಚಾಸಾ–2 ರವರ ಎಡಭಾಗದ ಹೊಟ್ಟೆಗೆ ಚುಚ್ಚಿ, ಚಾಸಾ–2 ರವರ ಹೊಟ್ಟೆಯ ಎಡಭಾಗ, ಒಕ್ಕಳಿನ ಕೆಳಭಾಗದಲ್ಲಿ ಮತ್ತು ಚಿಕ್ಕಕರುಳಿನಲ್ಲಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಈ ಕೃತ್ಯದಿಂದಾಗಿ ಚಾಸಾ–2 ರವರ ಸಾವು ಸಂಭವಿಸಿದರೆ, ನೀವು ಕೊಲೆ ಅಪರಾಧದ ತಪ್ಪಿತಸ್ಥರಾಗುವಿರೆಂದು ಗೊತ್ತಿದ್ದರು, ಆತನ ಕೊಲೆಗೆ ಪ್ರಯತ್ನಿಸಿದ್ದು, ಈ ಮೂ**ಲಕ ಭಾರತ ದಂಡ ಸಂಹಿತೆ ಕಲಂ 307 ಸಹವಾಚಕ** 34 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಶ್ರೀ ಡಿ.ಪುಟ್ಟಸ್ವಾಮಿ)**

ದಿನಾಂಕ: 03.11.2025

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮೈಸೂರು.